ಸ್ಥಾಪನೆ : ೧೯೧೫

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೧

## ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಇವುಗಳಲ್ಲಿ ಹತ್ತು ಪದಗಳಿಗೆ ಅರ್ಥ ಬರೆಯಿರಿ** **೧ x ೧೦=೧೦**

ಅರಿ, ಬಾಳ್, ವಸುಧಾ, ಬಸನ, ವಿಭು, ಆಜಿ, ಅನುಜ, ಕರಿ
ಅಂಗಜ, ಅನುಜೆ, ಮಧು, ಸುಮನ, ನಾತ, ಪೊಡವಿ, ತುರಗ

**II. ಎರಡು ಪದ್ಯಗಳ ಭಾವಾರ್ಥ ಬರೆಯಿರಿ.** **೨ x ೧೦=೨೦**

೧. ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರ ಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೇ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವ
ನೆನಲು ತೊಡೆ ಸೋಂಕಿನಲಿ ಸಾರಿದು ಶೌರಿಯಿಂತೆಂದ

೨. ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣಿಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

**III. ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ** **೫ x ೨=೧೦**

೧. ಬಾದಾಮಿ ಶಾಸನ ೨. ಅಷ್ಟಾವಂಕ
೩. ಕುಮಾರವ್ಯಾಸ ೪. ಕನಕದಾಸ

(ಪು.ತಿ.ನೋ)

೮/೧

**IV. ಮೂರು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ** **೩ x ೧೦=೩೦**

೧. ಭರತ ಬಾಹುಬಲಿಯರ ಯುದ್ಧದ ಸಂದರ್ಭವನ್ನು ವಿವರಿಸಿ.

೨. ಅಮೃತಮತಿ ಅಷ್ಟಾವಂಕನಿಗೆ ಮರುಳಾದ ಬಗೆಯನ್ನು ವಿವರಿಸಿ.

೩. ಹರಿಶ್ಚಂದ್ರ ಮತ್ತು ಗಾನ ರಾಣಿಯರ ನಾಟಕೀಯ ಸಂಭಾಷಣೆಯನ್ನು ವಿವರಿಸಿ.

೪. ರತ್ನಾಕರವರ್ಣಿ ತನ್ನ ಕಾವ್ಯದಲ್ಲಿ ಜೀವನ ಮೌಲ್ಯಗಳನ್ನು ಯಾವ ರೀತಿ ಪ್ರತಿಪಾದಿಸಿದ್ದಾನೆ? ವಿವರಿಸಿ.

**V. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ.** **೩ x ೧೦=೩೦**

೧. ವೀರರ ಕಳೇಬರಗಳನ್ನು ಕಂಡ ದುರ್ಯೋಧನನು ದುಃಖಿಸಿದ ಬಗೆ ಹೇಗೆ? ಚರ್ಚಿಸಿ.

೨. ಶ್ರೀರಾಮನು ಸೀತೆಯನ್ನು ಕಾಡಿಗೆ ಕಳುಹಿಸುವ ಸಂದರ್ಭದಲ್ಲಿ ಲಕ್ಷ್ಮಣನೊಂದಿಗೆ ನಡೆಸಿದ ಚರ್ಚೆಯನ್ನು ಬರೆಯಿರಿ.

೩. ಕೃಷ್ಣ ಮತ್ತು ಕರ್ಣರ ಸಂವಾದವನ್ನು ಕುಮಾರವ್ಯಾಸನ ಪದ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

೪. ರಾಗಿ ಮತ್ತು ನೆಲ್ಲಿನ (ಭತ್ತ) ಜಗಳದಲ್ಲಿ ರಾಗಿಗೆ ಗೆಲುವಾದ ಬಗೆ ಹೇಗೆ? ವಿವರಿಸಿ.

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೨

## ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**I. ಒಂದರ ಭಾವಾರ್ಥವನ್ನು ಬರೆಯಿರಿ.** **೧x೬=೬**

೧) ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ, ಶ್ವೇತ ಗಂಭೀರೆಯಲ್ಲ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ;
ದೇವರ ಪೂಜಿಸಲಿಲ್ಲ ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.

೨) ಕಣ್ಣಗಲಿಸಿ ನೋಡಲ್ಲಿ
ಮುಖವಾಡ ಕಳಚಿ ನಿಂತವರಿಗೆ
ಸ್ವಂತ ಮುಖಗಳೇ ಇಲ್ಲ!
ಮುಖರಹಿತರು ಮತ್ತು ಮುಖಹೀನರ ಮಧ್ಯೆ
ಸಾಗಿದೆ ಹೀಗೆ ಮುಖೇಡಿ ಬದುಕು
ಈಗೀಗ ಕಾಣಿಸುತ್ತಿಲ್ಲ ಕನ್ನಡಿಯಲ್ಲಿ ನನ್ನ ಮುಖವೂ !

**II. ನಾಲ್ಕನ್ನು ಸಂದರ್ಭ ಸಹಿತ ವಿವರಿಸಿ.** **೪x೪=೧೬**

೧) 'ನಾಳೆ ಗಂಡನ ಮನೆಗೆ ನೀ ಹೋಗದಿರುವೆಯಾ'

೨) ಕೂಳನು ಹೆಮ್ಮೆಗೆ ಬಿಸುಡುವರಲ್ಲಿ

೩) ಅಚರ ಜಗದ ಚಲನದಾಸೆ, ಮೂಕ ಜಗದ ಗೀತದಾಸೆ

೪) ಗಡಿಯ ಬೇಲಿಯ ತುಂಬಾ ಹೂ ಅರಳಿ ನಿಲ್ಲಲಿ





೫) ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟುತ್ತದೆ

೬) ನನ್ನ ವೈರಿಗೂ ಬೇಡ ಈ ಶಿಕ್ಷೆ

**III. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೨=೮**

೧) ಕುವೆಂಪು

೨) ಜಿ.ಪಿ. ರಾಜರತ್ನಂ

೩) ಚಂದ್ರಶೇಖರ ಕಂಬಾರ

೪) ಕೆ.ಎಸ್. ನಿಸಾರ್ ಅಹಮದ್

೫) ಸಿದ್ಧಲಿಂಗಯ್ಯ

೬) ಕೆ. ಷರೀಫಾ

**IV. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** **೪x೫=೨೦**

೧. 'ದುಃಖಸೇತು'ವಿನಲ್ಲಿ ಅನಾಥೆಯ ಬಗೆಗೆ ಕವಿತೋರುವ ಪ್ರೀತಿ, ಮರುಕ, ಅನುಕಂಪ ಎಂಥದ್ದು?

೨. ಹೆಣ್ಣಿನ ಬದುಕಿನ ಅಸಹಾಯಕತೆಯನ್ನು 'ಹೆಣ್ಣಾಟ' ಹೇಗೆ ಚಿತ್ರಿಸಿದೆ?

೩. 'ಕಾಳು ಕಣಜಕ್ಕೆ ಬಂದೀತು ಹೇಗೆ?' ಎಂದು ಕವಿ ಅನುಮಾನಿಸುವುದಕ್ಕೆ ಕಾರಣವೇನು?

೪. "ಗಾಂಧೀ ಸ್ಮರಣೆ"ಯಲ್ಲಿ "ಬಾಯಿ ಮುಚ್ಚಿ ನೆನೆ ನೆನೆ ಗಾಂಧಿಯನು" ಎನ್ನುವುದರ ಅಂತರಾರ್ಥವೇನು?

೫. 'ಮಗು ಮತ್ತು ಹಣ್ಣುಗಳು' ಕವಿತೆಯಲ್ಲಿ ಹುದುಗಿರುವ ಜೀವನ ತತ್ವವೇನು?

೬. 'ನನಗೆ ಈ ಉಂಗುರದಲ್ಲಿ ನೆಚ್ಚಿಗೆಯಿಲ್ಲ" ಎಂದು ಶಕುಂತಲೆ ತಣ್ಣಗೆ ನುಡಿಯಲು ಕಾರಣವೇನು?

**V. ಒಂದು ಪ್ರಶ್ನೆಗೆ ಉತ್ತರಿಸಿ.** **೧x೧೦=೧೦**

೧. 'ಶ್ರೀಮಂತರ–ಬಡವರ ನಡುವಿನ ಅಸಮಾನತೆ ಉಂಟುಮಾಡಬಹುದಾದ ಘೋರ ಪರಿಣಾಮಗಳನ್ನು 'ಕಲ್ಕಿ' ಕವಿತೆ ಹೇಗೆ ಚಿತ್ರಿಸಿದೆ? ವಿವರಿಸಿ.

೨. ಧರ್ಮ ಬೇರೆಯಾಗಿದ್ದರೂ ಮುಸಲ್ಮಾನರು ಭಾರತ ನೆಲದ ಕಂದಮ್ಮಗಳೇ ಆಗಿದ್ದಾರೆನ್ನುವ ನಿಲುವನ್ನು 'ಪ್ರಾರ್ಥನೆ' ಕವಿತೆ ಹೇಗೆ ಪ್ರಕಟಿಸಿದೆ? ವಿಶ್ಲೇಷಿಸಿ.

## ಭಾಗ – ೨

## ಸಣ್ಣಕಥೆಗಳು

**I. ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** **೩x೮=೨೪**

೧) 'ಪುನರ್ವಿವಾಹ' ಕಥೆಯಲ್ಲಿ ನಿರ್ಗತಿಕ ಹೆಣ್ಣನ್ನು ಉದ್ಧರಿಸುವೆನೆಂಬ ಕಥಾನಾಯಕನ ಸೋಗು ಬಯಲಾದದ್ದು ಹೇಗೆ? ವಿವರಿಸಿ.

೨) ಬಡವರ, ಕೂಲಿಕಾರರ ಬದುಕು ಉಳ್ಳವರ ದಾಹಕ್ಕೆ ಬಲಿಯಾಗುವ ಬಗೆಯನ್ನು 'ಮಣ್ಣು ದಿಬ್ಬದ ಮೇಲೆ' ಕಥೆ ಹೇಗೆ ಚಿತ್ರಿಸಿದೆ? ವಿಶದಪಡಿಸಿ.

೩) ಶಿಲ್ಪಕಲೆಗೆ ಜಾಗತೀಕರಣದಿಂದ ಉಂಟಾದ ಅಪಾಯಗಳನ್ನು 'ಶಿಲ್ಪಿ' ಕಥೆ ಚಿತ್ರಿಸಿರುವ ಬಗೆಯನ್ನು ವಿಶ್ಲೇಷಿಸಿ.

೪) ಗಂಡ ಸತ್ತಾಗ ಸರೋಜಳಲ್ಲಿ ವೈಮನಸ್ಸು ಹಗುರವಾದ ಭಾವ, 'ಬಿಡುಗಡೆ'ಯ ಸುಖದ ಭಾವ ಉಂಟಾದುದರ ಹಿನ್ನೆಲೆಯಲ್ಲಿ ವಿವರಿಸಿ.

೫) ವಿದ್ಯೆ ಕಲಿಯುವುದರ ಮೂಲಕ ದಲಿತರ ಬದುಕಿನಲ್ಲಿ ಆದ ಸ್ಥಿತ್ಯಂತರವನ್ನು 'ನೆಲ ನಡುಗಿದಾಗ' ಕಥೆ ಹೇಗೆ ಗುರುತಿಸಿದೆ? ಸ್ಪಷ್ಟಪಡಿಸಿ.

೬) ರಾಜಣ್ಣ ಅವ್ವನಿಗೆ ತಿರುಪತಿ ಯಾತ್ರೆ ಮಾಡಿಸಿದ್ದು ಹೇಗೆ? ವಿವರಿಸಿ.

**II. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೨=೮**

೧) ನಾ. ಡಿಸೋಜ
೨) 'ಕರ್ವಾಲೋ ಮನೆ'ಯ ವೈಶಿಷ್ಟ್ಯ
೩) ಅಮರೇಶ ನುಗಡೋಣಿ
೪) ಚಂದ್ರ ಅಮೆರಿಕನ್ ವೀಸಾ ಪಡೆದದ್ದು
೫) ಕುಂ. ವೀರಭದ್ರಪ್ಪ
೬) ಚಂದಗೋಪನ ದಿನಚರಿ

**III. ಎರಡಕ್ಕೆ ಸಂದರ್ಭ ಸಹಿತ ವಿವರಿಸಿ.** **೨x೪=೮**

೧) ನಾನು ಕುಬುಸ ತೊಟ್ಕೊಂಡು ಅದ್ಯಾವ ನರಕಕ್ಕೋಗ್ಲಿ !

೨) ನಿನ್ಗ ಹುಚ್ಚು ಹಿಡಿದಾದೇನು? ದಿನ ಕಾಯಿಪಲ್ಯೆ ತಂದು ಯಾಕ ಕೊಡ್ತಿದ್ದಿ?

೩) ಇನ್ನೊಂದು ವಾರದಲ್ಲಿ ನಿನ್ನ ವೀಸಾ ತಲುಪುತ್ತೆ, ಆಲ್ ದಿ ಬೆಸ್ಟ್.

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೩

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಕೆಳಗಿನವುಗಳಲ್ಲಿ ಎಂಟಕ್ಕೆ ಟಿಪ್ಪಣಿ ಬರೆಯಿರಿ** **೮ x ೫ =೪೦**

೧. ಶ್ರಮಣಧಾರೆಗಳು ಮುಂದಿಟ್ಟ ಕಾವ್ಯಮೀಮಾಂಸೆಯ ನಿಲುವುಗಳು

೨. ಕನ್ನಡ ಮೀಮಾಂಸೆಯ ಶೋಧದ ಚಾರಿತ್ರಿಕ ಬೆಳವಣಿಗೆ

೩. ಭಾರತೀಯ ಕಾವ್ಯಮೀಮಾಂಸೆ

೪. ಅನೇಕಾಂತವಾದ

೫. ಪ್ರಮಾಣ ನಿರಾಕರಣೆ

೬. ಕಾವ್ಯ ಪ್ರಯೋಜನ

೭. ಕವಿರಾಜಮಾರ್ಗ

೮. ದ್ವೈತಾದ್ವೈತ ನಿರಾಕರಣೆ

೯. ಬೌದ್ಧ ತಾತ್ವಿಕತೆಯ ಲಕ್ಷಣಗಳು

೧೦. ಸ್ತ್ರೀವಾದಿ ಚಿಂತನೆ

೧೧. ಪುರುಷ ಸೂಕ್ತದ ನಿರಾಕರಣ



**II. ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಮೂರು ಪುಟಗಳಿಗೆ ಮೀರದಂತೆ ಉತ್ತರಿಸಿ**
**೨ x ೧೫=೩೦**

೧. ಕನ್ನಡ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳನ್ನು ಚರ್ಚಿಸಿ.

೨. "ಜೈನರು ಕಾವ್ಯ ನಿರ್ಮಾಣದಲ್ಲಿ ತೊಡಗಿಕೊಂಡಷ್ಟೇ ಗಂಭೀರವಾಗಿ ಮೀಮಾಂಸಾ ನಿರ್ಮಾಣದಲ್ಲೂ ತೊಡಗಿಕೊಂಡವರು"– ಈ ಹೇಳಿಕೆಯನ್ನು ವಿಷದಪಡಿಸಿ.

೩. ಪ್ರಮಾಣ ಎಂದರೇನು? ಕನ್ನಡ ಕಾವ್ಯ ಮಾರ್ಗದಲ್ಲಿ ಪ್ರಮಾಣ ನಿರಾಕರಣೆ ಹೇಗೆ ವ್ಯಕ್ತವಾಗಿದೆ? ತಿಳಿಸಿ.

**II ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿ.**
**೩ x ೧೦=೩೦**

೧. ವಿಮರ್ಶೆ ಚಾರಿತ್ರಿಕ ಬೆಳವಣಿಗೆಯ ಘಟ್ಟಗಳನ್ನು ವಿವರಿಸಿ.

೨. ಎಚ್.ಎಸ್. ಶಿವಪ್ರಕಾಶರ ಸಮಗಾರ ಭೀಮವ್ವ ಕವಿತೆ ಪ್ರಾಯೋಗಿಕ ವಿಮರ್ಶೆಗೆ ಒಳಪಟ್ಟಿರುವ ರೀತಿಯನ್ನು ಪರಿಚಯಿಸಿ.

೩. 'ಹೆಣ್ಣು ಗಂಡು ಪರಸ್ಪರ ವಿರುದ್ಧ ವ್ಯಕ್ತಿತ್ವಗಳೇ'–ಸ್ತ್ರೀವಾದಿ ಕಲ್ಪನೆಯಲ್ಲಿ ಚರ್ಚಿಸಿ.

೪. ದೇವನೂರು ಮಹಾದೇವ ಅವರು ಪಂಪನ ಜೊತೆ ಕಳೆದ ಆ ರಸಘಳಿಗೆಗಳ ಕುರಿತು ಬರೆಯಿರಿ.

೫. 'ಕವಿರಾಜಮಾರ್ಗ ಬರೆದ ಕಾಲ ಕನ್ನಡದ ಅಸ್ಮಿತೆಯ ಉದಯದ ಕಾಲ' – ವಿಮರ್ಶಾ ನೆಲೆಯಲ್ಲಿ ಚರ್ಚಿಸಿ.

* * * *

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೪

**ಪ್ರಶ್ನೆಪತ್ರಿಕೆ – ೪**

## ಭಾಷಾ ವಿಜ್ಞಾನ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪x೫=೨೦**

೧. ಪಾರಿಭಾಷಿಕ ಪದಗಳು ಸೃಷ್ಟಿಯಾಗುವ ಬಗೆಯನ್ನು ತಿಳಿಸಿ.

೨. ಉಪಭಾಷೆಗಳು ಉಂಟಾಗಲು ಕಾರಣಗಳೇನು?

೩. 'ಆಡಳಿತದಲ್ಲಿ ಕನ್ನಡ ಬಳಕೆ'– ಕುರಿತು ಬರೆಯಿರಿ.

೪. ಭಾಷಾ ದ್ವಿರೂಪತ್ವವನ್ನು ವಿವರಿಸಿ.

೫. ವ್ಯಾಕರಣವೆಂದರೇನು? ಭಾಷಾ ವಿಜ್ಞಾನಿಗಳ ಅಭಿಪ್ರಾಯಗಳನ್ನು ತಿಳಿಸಿ.

೬. ಕನ್ನಡದಲ್ಲಿ ನಡೆದಿರುವ ತೌಲನಿಕ ಭಾಷಾ ಸಂಶೋಧನೆ ಕುರಿತು ಬರೆಯಿರಿ.

೭. ಕನ್ನಡ ಭಾಷೆಯ ಇತಿಹಾಸವನ್ನು ಪರಿಚಯ ಮಾಡಿಕೊಡಿ.

**II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೩x೧೦=೩೦**

೧. ಭಾಷಾ ವಿಜ್ಞಾನದ ಐದು ಐತಿಹಾಸಿಕ ತಿರುವುಗಳನ್ನು ಕುರಿತು ಬರೆಯಿರಿ.

೨. ಲಿಪಿ ಪರಿಷ್ಕರಣ ಎಂದರೇನು? ಬಿ.ಎಂ.ಶ್ರೀ ಅವರ ಕೊಡುಗೆಯನ್ನು ಚರ್ಚಿಸಿ.

೩. "ಅನ್ಯಭಾಷಾ ಶಿಕ್ಷಣ ಮಾತೃಭಾಷಾ ಶಿಕ್ಷಣದಷ್ಟು ಸುಲಭವಾದುದಲ್ಲ"– ವಿವರಿಸಿ.

೪. ಶಿಷ್ಟಭಾಷೆ ಎಂದರೇನು? ಸಾಮಾಜಿಕ ಭಾಷಾ ವಿಜ್ಞಾನಿಗಳ ನಿಲುವನ್ನು ತಿಳಿಸಿ.

**(ಪು.ತಿ.ನೋ)**

ರ / ೪

**III ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. ೨x೧೫=೩೦**

೧. ಮಂಡ್ಯ ಕನ್ನಡದ ವಿಶಿಷ್ಟತೆಯನ್ನು ಉದಾಹರಣೆ ಸಹಿತ ವಿವರಿಸಿ.

೨. ಕನ್ನಡ ಭಾಷಾ ಏಕೀಕರಣ ಎಂದರೇನು? ವಿವಿಧ ವಿದ್ವಾಂಸರ ಅಭಿಪ್ರಾಯಗಳೊಂದಿಗೆ ಚರ್ಚಿಸಿ.

೩. ಸಾಮಾಜಿಕ ಭಾಷಾ ವಿಜ್ಞಾನ ಬೆಳೆದು ಬಂದ ಬಗೆಯನ್ನು ವಿಮರ್ಶಿಸಿ.

೪. ಭಾಷಾವಾರು ಪ್ರಾಂತಗಳ ಬಗ್ಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಅಭಿಪ್ರಾಯವನ್ನು ಕುರಿತು ಬರೆಯಿರಿ.

**IV. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ. ೫x೪=೨೦**

೧. ಪಾರಿಭಾಷಿಕ ಪದಗಳು

೨. ಡಿ.ಎಲ್. ನರಸಿಂಹಾಚಾರ್

೩. ಕ್ಷೇತ್ರಭಾಷಾ ವಿಜ್ಞಾನ

೪. ಸರ್ ವಿಲಿಯಂ ಜೋನ್ಸ್

೫. ನ್ಯಾಯಾಲಯದಲ್ಲಿ ಕನ್ನಡ ಬಳಕೆ

೬. ಭಾಷಾವಾರು ಪ್ರಾಂತಗಳು

೭. ವಿಭಕ್ತಿ ಪ್ರತ್ಯಯಗಳು

* * * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ರತ್ನ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೫

## ಜನಪದ ಸಾಹಿತ್ಯ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### 'ಎ' ಭಾಗ

**I. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.** **೫x೧೦=೫೦**

೧. ವಿವಿಧ ಜಾನದಪ ವಿದ್ವಾಂಸರ ವ್ಯಾಖ್ಯೆಗಳೊಂದಿಗೆ ಜಾನಪದ ಎಂದರೇನು? ವಿವರಿಸಿ.

೨. ಜಾನಪದ ಪ್ರಕಾರಗಳನ್ನು ಕುರಿತು ವಿವರಿಸಿ.

೩. ಒಗಟುಗಳ ಸ್ವರೂಪ ಲಕ್ಷಣಗಳನ್ನು ತಿಳಿಸಿ? ಸ್ತ್ರೀವಾದಿ ದೃಷ್ಟಿಯ ಒಗಟುಗಳ ಬಗ್ಗೆ ಬರೆಯಿರಿ.

೪. 'ಹಲಗಲಿಯ ಬೇಡರು' ಲಾವಣಿಯಲ್ಲಿನ ರಾಷ್ಟ್ರಪ್ರೇಮವನ್ನು ಕುರಿತು ಬರೆಯಿರಿ.

೫. ಜನಪದ ಗೀತೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವೇನು? ವಿವರಿಸಿ.

೬. ಜನಪದ ಮಹಾಕಾವ್ಯಗಳನ್ನು ಕುರಿತು ಬರೆಯಿರಿ.

೭. "ಮುಸುರೆ ತಿಕ್ಕುವವಳು" ಕತೆಯ ಸ್ವಾರಸ್ಯವೇನು? ವಿವರಿಸಿ.

೮. "ಚಿಕ್ಕ ಹೊನ್ನಿ, ದೊಡ್ಡ ಹೊನ್ನಿ' ಜನಪದ ಕಥೆಯಲ್ಲಿ ಪಾಪಕ್ಕೆ ತಕ್ಕ ಶಿಕ್ಷೆ ಎಂಬುದು ಹೇಗೆ ವಿವರಿಸಿ.

**II. ಈ ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೫x೪=೨೦**

೧. ಉತ್ತರದೇವಿ
೨. ಸಿರಿಕಾವ್ಯ
೩. ಜಾನಪದ ಸಂಪಾದನೆ
೪. ಡೊಂಬರ ಹುಡುಗ
೫. ಗಾದೆಗಳು
೬. ಜನಪದ ಗೀತೆ
೭. ಕಲ್ಯಾಣ ಪಟ್ಟಣದ ಸಾಲು

(ಪು.ತಿ.ನೋ)



### 'ಬಿ' ಭಾಗ

**III. ಐದನೆಯ ಪ್ರಶ್ನೆ ಬಿಡದಂತೆ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** **೩x೧೦=೩೦**

೧. ಭಾರತೀಯ ಸಂಸ್ಕೃತಿಗೆ ಕನ್ನಡ ಸಂಸ್ಕೃತಿಯ ಕೊಡುಗೆಯನ್ನು ವಿವರಿಸಿ.

೨. ಕನ್ನಡ ಕವಿಗಳ ಕಾವ್ಯಗಳಲ್ಲಿ ನಾಡು–ನುಡಿ–ಪ್ರೇಮ ಹೇಗೆ ವ್ಯಕ್ತವಾಗಿವೆ ವಿವರಿಸಿ.

೩. ಕನ್ನಡ–ಕರ್ನಾಟಕ–ಭಾರತಗಳ ಹಿನ್ನೆಲೆಯಲ್ಲಿ ಡಾ. ಚಿದಾನಂದಮೂರ್ತಿ ಅವರ ನಿಲುವುಗಳನ್ನು ವಿವರಿಸಿ?

೪. ಧರ್ಮ ಸಮನ್ವಯತೆಯನ್ನು ಕಾಪಾಡಿದ ರಾಜಮನೆತನಗಳ ಬಗ್ಗೆ ಬರೆಯಿರಿ.

೫. **ಈ ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.**

೧. ಕದಂಬರು

೨. ಗೊಮ್ಮಟನ ಪ್ರತಿಮೆ

೩. ಜೀ.ಶಂ. ಪರಮಶಿವಯ್ಯ

೪. ಹುಲಿತನ ಮರೆತ ಹುಲಿಮರಿ

೫. ಕವಿಗಳು – ಸಂತರು

೬. ಹುಯೆನ್‌ತ್ಸಾಂಗ್‌ನ ಮಾತುಗಳು

೭. ಕನ್ನಡ ಪ್ರೇಮ

* * *